‘ಕರ್ಮಯೋಗ’ ಗ್ರಂಥಮಾಲಿಕೆ : ಖಂಡ ೧

# ಕರ್ಮಯೋಗದ ಪ್ರಾಸ್ತಾವಿಕ

(Introduction to Karmayog - Kannada)


**ಸಂಕಲನಕಾರರು**

**ಪರಾತ್ಪರ ಗುರು ಡಾ. ಜಯಂತ ಬಾಳಾಜಿ ಆಠವಲೆ**

(‘ಸಂತಪದವಿ’ ಅಥವಾ ‘ಗುರುಪದವಿ’ ಎಂದರೆ ಶೇ. ೭೦,
‘ಸದ್ಗುರುಪದವಿ’ ಎಂದರೆ ಶೇ. ೮೦ ಹಾಗೂ ‘ಪರಾತ್ಪರ ಗುರುಪದವಿ’
ಎಂದರೆ ಶೇ. ೯೦ ಮತ್ತು ಅದಕ್ಕಿಂತಲೂ ಹೆಚ್ಚು ಆಧ್ಯಾತ್ಮಿಕ ಮಟ್ಟ !)

**ಪೂ. ಸಂದೀಪ ಗಜಾನನ ಆಳಶಿ**



## ಸನಾತನ ಸಂಸ್ಥೆ


**ಜೂನ್ ೨೦೧೮ ರ ವರೆಗೆ ಸನಾತನದ ೩೧೦ ಗ್ರಂಥಗಳ ಕನ್ನಡ, ಹಿಂದಿ, ಆಂಗ್ಲ, ಮರಾಠಿ, ಗುಜರಾತಿ, ತಮಿಳು, ತೆಲುಗು, ಮಲಯಾಳಂ, ಬಂಗಾಲಿ, ಓರಿಯಾ, ಪಂಜಾಬಿ, ಅಸ್ಸಾಮಿ, ನೇಪಾಳಿ, ಜರ್ಮನ್, ಸರ್ಬಿಯನ್, ಫ್ರೆಂಚ್ ಮತ್ತು ಸ್ಪ್ಯಾನಿಶ್ ಈ ೧೭ ಭಾಷೆಗಳಲ್ಲಿ ೭೨,೯೮,೦೦೦ ಪ್ರತಿಗಳು !**

**ಪ್ರಕಾಶಕರು** : ಶ್ರೀ ಸಿದ್ಧೇಶ್ವರ ಧರ್ಮಜಾಗೃತಿ ಸಂಸ್ಥೆ
Shree Siddheshwar Dharmajagruti Sanstha
ಮ.ಸಂ. 2ಬಿ–29ಎ, ಇಂದಿರಾನಗರ, ಕುಕ್ಕಿಕಟ್ಟೆ,
ಉಡುಪಿ 576 101, ಕರ್ನಾಟಕ. ದೂ.ಕ್ರ. : +91 93424 35617
ಇತರ ದೂ.ಕ್ರ. (ಗೋವಾ) : +91 (0832) 2312664
ವಿ–ಅಂಚೆ : granth@sanatan.org

**ಮುಖಪುಟದ ಪರಿಕಲ್ಪನೆ** : ಸೌ. ಜಾಹ್ನವಿ ಶಿಂದೆ ಮತ್ತು
ಶ್ರೀ. ಗುರುದಾಸ ಖಂಡೇಪಾರಕರ

**First Edition** : Divali, Kaliyug varsha 5110
(28th October 2008)

**Second Edition** : Makara Sankranthi, Kaliyug Varsh 5117
(15th January 2016)

**Second Edition**
**Third reprint** : Sri Ganesh Jayanti, Kaliyug Varsh 5123
(4th February 2022)

Translated from original Marathi text ‘Karmayogache Prastavik’

**ಅನುವಾದಕರು** : ಶ್ರೀಮತಿ ಅಶ್ವಿನಿ ಪ್ರಭು, ಡಾ. ಪ್ರಕಾಶ ಘಾಳಿ
ಶ್ರೀ. ಗಣೇಶ ರಾಜಾರಾಮ ಕಾಮತ್

**ಮುದ್ರಣಸ್ಥಳ** : ಆಮೋದ್ ಗ್ರಾಫಿಕ್ಸ್, ಬೆಂಗಳೂರು – 560 010.

**ದೇಣಿಗೆ ಮೌಲ್ಯ** : ₹ 60/–

**ISBN :** 978-93-84460-55-6

ॐ ಗ್ರಂಥ ಕ್ರ. : 122

© **ಪ್ರಕಾಶಕರು** All rights are reserved. No part of this publication maybe reproduced, stored in a retrieval system or transmitted, in any form or by any means, mechanical, photocopying, recording or otherwise, without prior written permission of the original publisher. Violators will be liable for criminal / civil action.

## ಮನೋಗತ

ಕೆಲವು ಜನರಿಗೆ ‘ಕರ್ಮಯೋಗ’ ಎಂದರೆ, ಭಿಕಾರಿಗಳಿಗೆ ದಾನ ಮಾಡುವವರು, ಶಾಲೆ-ಮಹಾವಿದ್ಯಾಲಯಗಳನ್ನು ಕಟ್ಟಿಸುವವರು, ಸಮಾಜಕಾರ್ಯವನ್ನು ಮಾಡುವ ‘ಕರ್ಮಯೋಗಿ’ಗಳು ನೆನಪಿಗೆ ಬರುತ್ತಾರೆ. ಇಂತಹವರ ಕಾರ್ಯವು ಹೆಚ್ಚಾಗಿ ಭಾವನೆಯಿಂದ ಅಥವಾ ಪ್ರಸಿದ್ಧಿಗಾಗಿ ನಡೆದಿರುತ್ತದೆ, ಆದುದರಿಂದ ಇದು ‘ಕರ್ಮಯೋಗ’ವಾಗುವುದಿಲ್ಲ. ಹಾಗಾದರೆ ನಿರ್ದಿಷ್ಟವಾಗಿ ಕರ್ಮಯೋಗ ಎಂದರೆ ಏನು ? ಯಾವ ಕರ್ಮಗಳನ್ನು ಮಾಡುವುದರಿಂದ ನಮ್ಮ ಅಧ್ಯಾತ್ಮಿಕ ಉನ್ನತಿಯಾಗಿ ನಮಗೆ ಈಶ್ವರ ಪ್ರಾಪ್ತಿಯಾಗುತ್ತದೆಯೋ, ಅಂತಹ ಕರ್ಮಗಳನ್ನು ಮಾಡುವುದಕ್ಕೆ ‘ಕರ್ಮಯೋಗ’ವೆನ್ನುತ್ತಾರೆ. ಕರ್ಮಯೋಗದಲ್ಲಿ ಕರ್ಮಗಳು ವ್ಯಾವಹಾರಿಕವಾಗಿದ್ದರೂ ಅವುಗಳಿಂದ ನಮ್ಮ ಚಿತ್ತದ ಮೇಲೆ ಸಂಸ್ಕಾರಗಳಾಗದೇ, ನಾವು ಸಂಸ್ಕಾರ ಬಂಧನಗಳಿಂದ ಮುಕ್ತರಾಗಬೇಕು ಎಂಬುದು ಅಪೇಕ್ಷಿತವಾಗಿದೆ. ಆಸಕ್ತಿ ಮತ್ತು ಫಲದ ಅಪೇಕ್ಷೆಯನ್ನು ತ್ಯಜಿಸಿ, ಹಿಂದೂ ಧರ್ಮಕ್ಕೆ ಮತ್ತು ಧರ್ಮಶಾಸ್ತ್ರಕ್ಕೆ ಅಪೇಕ್ಷಿತವಿರುವ ಕರ್ಮಗಳನ್ನು ಮಾಡುವುದು ಕರ್ಮಯೋಗದ ಶ್ರೇಷ್ಠ ವ್ಯಾಖ್ಯೆಯಾಗಿದೆ ಎಂದು ಹೇಳಬಹುದು. ಭಕ್ತಿಮಾರ್ಗಿ, ಧ್ಯಾನಮಾರ್ಗಿ ಮುಂತಾದವರು ಅವರ ಸಾಧನೆಗೆ ಕರ್ಮಯೋಗದ ಜೊತೆ ನೀಡಿದರೆ ಅವರ ಸಾಧನೆಯು ಇನ್ನೂ ಚೆನ್ನಾಗಿ ಅಗಲು ಸಹಾಯವಾಗುತ್ತದೆ.

‘ಕರ್ಮಯೋಗ’ ವಿಷಯದ ವ್ಯಾಪ್ತಿಯು ಬಹಳ ವಿಶಾಲವಾಗಿರುವುದರಿಂದ ಅದಕ್ಕೆ ಸಂಬಂಧಿಸಿದ ಬೇರೆ ಬೇರೆ ವಿಷಯಗಳನ್ನು ‘ಕರ್ಮಯೋಗ’ದ ಗ್ರಂಥಮಾಲಿಕೆಯಲ್ಲಿನ ವಿವಿಧ ಗ್ರಂಥಗಳಲ್ಲಿ ಕೊಡಲಾಗಿದೆ. ಪ್ರಸ್ತುತ ಗ್ರಂಥವು ಕರ್ಮಯೋಗದ ಬಗ್ಗೆ ಮೂಲಭೂತ ಮಾಹಿತಿಯನ್ನು ನೀಡುವ ಮತ್ತು ಈ ಮಾರ್ಗದಿಂದ ಸಾಧನೆಯನ್ನು ಮಾಡುವವರಿಗೆ ಕರ್ಮಯೋಗದ ಸಾರವನ್ನು ಹೇಳುವ ಗ್ರಂಥವಾಗಿದೆ. ಕರ್ಮಯೋಗದ ಇತಿಹಾಸ; ಕರ್ಮಯೋಗದ ಸಂಬಂಧದಲ್ಲಿನ ಅರ್ಜುನನ ಸಂಶಯ ಮತ್ತು ಶ್ರೀಕೃಷ್ಣನು ಅರ್ಜುನನ ಸಂದೇಹ ನಿವಾರಣೆ ಮಾಡುವುದು; ಕರ್ಮವನ್ನು ಮಾಡುವುದರ ಮಹತ್ವ; ವ್ಯಷ್ಟಿ ಮತ್ತು ಸಮಷ್ಟಿ ಸಾಧನೆಯ ದೃಷ್ಟಿಯಿಂದ ಕರ್ಮಯೋಗದ ಮಹತ್ವ; ಕರ್ಮಯೋಗದ ವೈಶಿಷ್ಟ್ಯಗಳು; ಕರ್ಮಯೋಗದ ರಹಸ್ಯ ಅಂದರೆ ಕರ್ತೃತ್ವದ ತ್ಯಾಗ ಮತ್ತು ಕರ್ಮಯೋಗ, ಜ್ಞಾನಯೋಗ ಮತ್ತು ಭಕ್ತಿಯೋಗ, ಈ ಮಾರ್ಗಗಳಿಗನುಸಾರ ಅದನ್ನು ಹೇಗೆ ಮಾಡಬೇಕು; ಸ್ವಧರ್ಮಕರ್ಮ ಮತ್ತು ಕರ್ತವ್ಯಕರ್ಮಗಳನ್ನು ಹೇಗೆ ಮತ್ತು ಏಕೆ ಮಾಡಬೇಕು ಇತ್ಯಾದಿ ಮಾಹಿತಿಯನ್ನು ಈ ಗ್ರಂಥದಲ್ಲಿ ನೀಡಲಾಗಿದೆ.

ಮಹಾನ ಯೋಗತಪಸ್ವಿ ಗುರುದೇವ ಡಾ. ಕಾಟೇಸ್ವಾಮಿಜಿಯವರು ನಮಗೆ ಶ್ರೀಮದ್ಭಗವದ್ಗೀತೆಯಲ್ಲಿನ ಬಹಳಷ್ಟು ಶ್ಲೋಕಗಳ ಗೂಢಾರ್ಥವನ್ನು ಹೇಳಿರುವುದರಿಂದ ಕರ್ಮಯೋಗದಂತಹ ಕಠಿಣ ವಿಷಯವನ್ನು ಈ ಗ್ರಂಥದಲ್ಲಿ ನಮಗೆ ಸುಲಭ ಮಾಡಲು ಸಾಧ್ಯವಾಯಿತು. ಇದರ ಬಗ್ಗೆ ನಾವು ಗುರುದೇವರ ಚರಣಗಳಲ್ಲಿ ಎಷ್ಟು ಕೃತಜ್ಞತೆಗಳನ್ನು ಅರ್ಪಿಸಿದರೂ ಅದು ಕಡಿಮೆಯೇ ಆಗಿದೆ.

ಪ್ರತ್ಯಕ್ಷ ಪ್ರತಿದಿನದ ಜೀವನಕ್ಕೆ ಸಂಬಂಧಿಸಿದ ಕರ್ಮಯೋಗವನ್ನು ಆಚರಿಸಿ ಆಧ್ಯಾತ್ಮಿಕ ಉನ್ನತಿಯನ್ನು ಮಾಡಿಕೊಳ್ಳುವ ಇಚ್ಛೆಯು ಸಾಧಕರ ಮನಸ್ಸಿನಲ್ಲಿ ನಿರ್ಮಾಣವಾಗಲಿ ಎಂದು ಗುರುಚರಣಗಳಲ್ಲಿ ಪ್ರಾರ್ಥನೆ ! - **ಸಂಕಲನಕಾರರು**

# ಅನುಕ್ರಮಣಿಕೆ

(ಕೆಲವು ಮಹತ್ವದ ಅಂಶಗಳನ್ನು ‘*’ ಈ ಗುರುತಿನಲ್ಲಿ ಕೊಡಲಾಗಿದೆ.)


**೧. ಕರ್ಮಯೋಗದ ವ್ಯಾಖ್ಯೆ** **೧೪**

**೨. ಕರ್ಮಯೋಗದ ಸಮಾನಾರ್ಥಕ ಶಬ್ದಗಳು** **೧೪**

**೩. ಕರ್ಮ ಮತ್ತು ಕರ್ಮಯೋಗ** **೧೪**

* ನಿಷ್ಕಾಮಭಾವ ಇಲ್ಲದಿದ್ದರೆ, ಅದು ಕರ್ಮಯೋಗವಾಗದೇ ಕೇವಲ ಕರ್ಮವಾಗುತ್ತದೆ ೧೫
* ಕರ್ಮಯೋಗದಲ್ಲಿನ ಕರ್ಮವೆಂದರೆ ಯಾವುದಾದರೊಂದು ಕರ್ಮವಲ್ಲ, ಕೇವಲ ವೇದವಿಹಿತ ಕರ್ಮಗಳು ೧೫
* ಅಶಾಸ್ತ್ರೀಯ ಕರ್ಮಗಳನ್ನು ಕೌಶಲ್ಯದಿಂದ ಮಾಡಲು ಕರ್ಮಯೋಗವಿಲ್ಲ ೧೬
* ಕರ್ಮದಿಂದ ಸಮಾಧಾನ ಸಿಗುವುದು, ಎಂದರೆ ಕರ್ಮಯೋಗವನ್ನು ಸಾಧಿಸುವುದು ೧೬

**೪. ಕರ್ಮಯೋಗದ (ಕರ್ಮಸಂನ್ಯಾಸಯೋಗದ) ಇತಿಹಾಸ** **೧೬**

**೫. ಕರ್ಮಯೋಗದ ಮಹತ್ವ** **೨೪**

೫ ಅ. ಕರ್ಮಯೋಗಕ್ಕನುಸಾರ ಕರ್ಮದ ಮಹತ್ವ ೨೪

೫ ಆ. ವ್ಯಷ್ಟಿ ಸಾಧನೆಯ ಸಂದರ್ಭದಲ್ಲಿ ಕರ್ಮಯೋಗದ ಮಹತ್ವ ೨೬

* ಕರ್ಮಗಳನ್ನು ಕೌಶಲ್ಯದಿಂದ ಮಾಡುವುದೇ ಯೋಗ ೨೭
* ಚಿತ್ತಶುದ್ಧಿಗಾಗಿ ಕರ್ಮಗಳನ್ನು ಮಾಡುವುದು ಅನಿವಾರ್ಯವಾಗಿದೆ ೨೭
* ವಾಸನೆಗಳ ತ್ಯಾಗವನ್ನು ಮಾಡಲು ಕರ್ಮಯೋಗವನ್ನು ಆಚರಿಸುವುದು ಆವಶ್ಯಕವಾಗಿದೆ ೨೭
* ಕರ್ಮಯೋಗವೆಂದರೆ ಸಾಕ್ಷಿತ್ವವನ್ನು ನಿರ್ಮಾಣ ಮಾಡುವ ರಹಸ್ಯ ೨೯
* ಕರ್ಮಯೋಗದಿಂದ ಎಲ್ಲ ದುಃಖಗಳಿಂದ ಮುಕ್ತಿಯು ಸಿಗುವುದು ೩೦
* ಕರ್ಮಯೋಗದಿಂದ ಭವರೋಗವು (ಜನ್ಮ-ಮೃತ್ಯು) ಇಲ್ಲವಾಗುವುದು ೩೦

೫ ಇ. ಸಮಷ್ಟಿ ಸಾಧನೆಯ ಸಂದರ್ಭದಲ್ಲಿ ಕರ್ಮಯೋಗದ ಮಹತ್ವ ೩೦

* ಸಮಾಜದ ಮುಂದೆ ಆದರ್ಶವನ್ನಿಡುವುದು ೩೧
* ಸಮಷ್ಟಿ ಪುಣ್ಯವು ಹೆಚ್ಚಾಗಿ ರಾಷ್ಟ್ರವು ಆಚಾರವಿಚಾರಸಂಪನ್ನ ಮತ್ತು ಸಮೃದ್ಧವಾಗುವುದು ೩೨

**೬. ಕರ್ಮಯೋಗದ ವೈಶಿಷ್ಟ್ಯಗಳು** **೩೨**

* ಕರ್ಮದ ಗತಿಯು (ವ್ಯಾಪ್ತಿ) ಆಳವಾಗಿರುವುದು ೩೨

* ಕರ್ಮಗಳ ತ್ಯಾಗವನ್ನು ಮಾಡಿ ಕರ್ಮತ್ಯಾಗವನ್ನು ಸಾಧಿಸಲು ಆಗುವುದಿಲ್ಲ ೩೩
* ಯಜ್ಞಕ್ಕಾಗಿ ಮಾಡಿದ ಕರ್ಮಗಳು ಮುಕ್ತಿಯನ್ನು ಕೊಡುತ್ತವೆ ೩೪

**೭. ಕರ್ಮಯೋಗದ ರಹಸ್ಯ ಎಂದರೆ ಕರ್ತೃತ್ವದ ತ್ಯಾಗ ೩೪**

೭ ಅ. ಕರ್ತಾ (ಕರ್ಮವನ್ನು ಮಾಡುವವನು) ೩೪
೭ ಆ. ಕರ್ತೃತ್ವದ ತ್ಯಾಗ ೩೯

**೮. ಕರ್ಮಯೋಗದ ಅಧಿಕಾರವಿಲ್ಲದವರು ೪೭**

* ದೇವರನ್ನು ನಂಬದ ಸಜ್ಜನರೆಂದರೆ ಡಾಂಭಿಕ ಕರ್ಮಯೋಗಿಗಳು ೪೭
* ಧರ್ಮಕಾರ್ಯದ ಮೇಲೆ ವಿಶ್ವಾಸವಿಲ್ಲದ ಸಂತರು ಸಾಮಾಜಿಕ ಕಾರ್ಯದಲ್ಲಿ ತೊಡಗುವುದು ೪೮

**೯. ಕರ್ಮಯೋಗಕ್ಕನುಸಾರ ಮಾಡಬೇಕಾದ ಕರ್ಮಗಳ (ಸಾಧನೆಯ) ಸಾರಾಂಶ ೪೯**

೯ ಅ. ಕರ್ಮಬಂಧನದಲ್ಲಿ ಸಿಲುಕದೇ ಕರ್ಮಗಳನ್ನು ಹೇಗೆ ಮಾಡಬೇಕು ? ೪೯
೯ ಆ. ಆಸಕ್ತಿರಹಿತರಾಗಿ ನಿರಂತರ ಸ್ವಧರ್ಮಕರ್ಮ ಮತ್ತು ಕರ್ತವ್ಯ ಕರ್ಮಗಳನ್ನು ಮಾಡುವುದೇ ಕರ್ಮಯೋಗದ ಸಾರವಾಗಿದೆ. ೫೦
೯ ಇ. ಕರ್ಮಬಂಧನದಲ್ಲಿ ಸಿಲುಕಿಕೊಳ್ಳುವುದರ ಕಾರಣಗಳು ೫೨
೯ ಈ. ಕರ್ತವ್ಯವೆಂದು ಮಾಡಿದ ಕರ್ಮವು ಕರ್ಮಬಂಧನದಲ್ಲಿ ಸಿಲುಕಿಸುವುದಿಲ್ಲ ೫೩

**೧೦.ಅನುಭೂತಿ ೫೩**

---

**卐 ಕೆಲವು ಸಾಂದರ್ಭಿಕ ಅಂಶಗಳು ೫೬**

**卐 'ಕರ್ಮಯೋಗದ ಪ್ರಾಸ್ತಾವಿಕ'ದ ಆಳವಾದ ಜ್ಞಾನ ೫೭**

**ಸನಾತನದ ಗ್ರಂಥಗಳಲ್ಲಿ ಸಂಸ್ಕೃತ ಶ್ಲೋಕವನ್ನು ಕೊಡುವುದರ ಕಾರಣಗಳು**

ಸಂಸ್ಕೃತವು ದೇವಭಾಷೆಯಾದುದರಿಂದ ಚೈತನ್ಯಮಯವಾಗಿದೆ. ಚೈತನ್ಯದ ಲಾಭವು ವಾಚಕರಿಗೆ ಸಿಗಬೇಕು ಎಂದು ಗ್ರಂಥಗಳಲ್ಲಿ ಸಂಸ್ಕೃತ ಶ್ಲೋಕಗಳನ್ನು ಮುದ್ರಿಸಲಾಗುತ್ತದೆ. ಸಂಸ್ಕೃತ ತಿಳಿಯದಿದ್ದರೂ ಶ್ಲೋಕವನ್ನು ಓದುವ ಪ್ರಯತ್ನವನ್ನು ಮಾಡಬೇಕು. ಅರ್ಥ ತಿಳಿಯದಿದ್ದರೂ ಅದರಲ್ಲಿನ ಚೈತನ್ಯದ ಲಾಭವು ಖಂಡಿತವಾಗಿಯೂ ಆಗುತ್ತದೆ.

ಎಲ್ಲ ಭಾಷೆಗಳ ಜನನಿಯಾಗಿರುವ ಸಂಸ್ಕೃತ ಭಾಷೆಯು, ಹಿಂದೂಗಳ ಸಮೃದ್ಧ ಮತ್ತು ಗೌರವಶಾಲಿ ಸಂಸ್ಕೃತಿಯ ಪ್ರತೀಕವಾಗಿದೆ. ಗ್ರಂಥದಲ್ಲಿ ಸಂಸ್ಕೃತ ಶ್ಲೋಕವನ್ನು ಮುದ್ರಿಸುವುದೆಂದರೆ, ಒಂದು ರೀತಿಯಲ್ಲಿ ಹಿಂದೂ ಸಂಸ್ಕೃತಿಯನ್ನು ಕಾಪಾಡುವ ಸಣ್ಣ ಪ್ರಯತ್ನವಾಗಿದೆ.